ಗುರುಗಳ ಅವಗಾಹನೆಗೆ ಮುಂಚಿತವಾಗಿ ಉಡುಪಿಗೆ ಕಳಿಸಿ ಕೊಟ್ಟರು. ಮರುಪ್ರಯಾಣದಲ್ಲಿ ಶ್ರೀಮಧ್ವರು ಬಂಗಾಳಕ್ಕೂ ಹೋಗಿದ್ದರು. ದಾರಿಯಲ್ಲೆಲ್ಲಾ ಅವರು ತಮ್ಮ ಸಿದ್ಧಾಂತವನ್ನು ಬೋಧಿಸುತ್ತಿದ್ದರು. ಗೌರಾಂಗ ಪ್ರಭು ಅಥವಾ ಕೃಷ್ಣಚೈತನ್ಯರ ಜನ್ಮಸ್ಥಾನವಾದ ನವದ್ವೀಪಕ್ಕೆ ಹೋಗಿ, ಅಲ್ಲಿಯ ಜನರಿಗಾಗಿ ಪಾಠಪ್ರವಚನ ನಡೆಸಿದರು. ಬಂಗಾಳ ದೇಶದಲ್ಲಿ ಹರಡಿರುವ ಚೈತನ್ಯಪಂಥವು ತನ್ನ ತತ್ತ್ವಗಳನ್ನು ಮಧ್ವಮುನಿಯ ಮತದ ಆಧಾರದ ಮೇಲೆ ರೂಢಿಸಿಕೊಂಡಿದೆ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ಬರುವಾಗ ಮಾರ್ಗ ದಲ್ಲಿ ಗೋದಾವರಿ ಪ್ರಾಂತಕ್ಕೂ ಹೋಗಿದ್ದರು. ಅಲ್ಲಿ ಶೋಭನ ಭಟ್ಟ ಮತ್ತು ಶಾಮಾಶಾಸ್ತ್ರಿ ಎಂಬ ಮಹಾಪಂಡಿತರನ್ನು ವಾದ ದಲ್ಲಿ ಸೋಲಿಸಿದರು. ಅವರಿಬ್ಬರೂ ಶ್ರೀಮಧ್ವರ ಶಿಷ್ಯತ್ವವನ್ನು ವಹಿಸಿದರು. ಮುಂದೆ ಅವರಿಬ್ಬರೂ ಪದ್ಮನಾಭತೀರ್ಥ ಮತ್ತು ನರಹರಿತೀರ್ಥ ಎಂಬ ಹೆಸರಿನಿಂದ ಯತಿಧರ್ಮವನ್ನು ಅಪ್ಪಿ ಕೊಂಡರು.

ಮರಳಿ ಬಂದಮೇಲೆ ಶ್ರೀಮಧ್ವರು ಶ್ರೀಕೃಷ್ಣನ ವಿಗ್ರಹವನ್ನು ಉಡುಪಿಯಲ್ಲಿ ಸ್ಥಾಪಿಸಿದರು. ಎಂಟು ಜನ ಶಿಷ್ಯರಿಗೆ ಸಂನ್ಯಾಸ ದೀಕ್ಷೆ ಕೊಟ್ಟು, ಎಂಟು ಮಠಗಳನ್ನು ಸ್ಥಾಪಿಸಿ, ಅವರಿಗೆ ಪರ್ಯಾಯ ಪದ್ಧತಿಯಿಂದ ಶ್ರೀಕೃಷ್ಣನ ಪೂಜೆ ಮಾಡುವ ಅಧಿಕಾರ ವಹಿಸಿಕೊಟ್ಟರು.

ಹಿಂದಿನ ಕಾಲದಲ್ಲಿ ಯಜ್ಞಗಳಲ್ಲಿ ಪಶುಬಲಿಗೆ ಅವಕಾಶ ವಿತ್ತು. ಶ್ರೀಮಧ್ವರು ತಮ್ಮ ಮಾತಿನಿಂದಲೂ, ಬರವಣಿಗೆ ಯಿಂದಲೂ ಇಂತಹ ದುಷ್ಟ ಪದ್ಧತಿಯನ್ನು ವಿರೋಧಿಸಿದರು. ಜೀವಂತ ಪ್ರಾಣಿಗೆ ಬದಲಾಗಿ ಹಿಟ್ಟಿನ ಪಶುವನ್ನು ಬಳಸಬಹು ದೆಂದು ಹೇಳಿದರು.

ಶ್ರೀರಾಮಾನುಜ ಮತದವರು ಶ್ರೀಮದ್ರಾಮಾಯಣಕ್ಕೆ ಪ್ರಾಮುಖ್ಯತೆ ಕೊಟ್ಟರೆ, ಶ್ರೀಮಧ್ವರು ಮಹಾಭಾರತಕ್ಕೆ ಪ್ರಾಮುಖ್ಯತೆ ಕೊಟ್ಟರು. 'ಮಹಾಭಾರತ ತಾತ್ಪರ್ಯ ನಿರ್ಣಯ' ಗ್ರಂಥವನ್ನು ರಚಿಸಿ ಅಲ್ಲಿರುವ ಸಂದಿಗ್ಧ ವಿಷಯಗಳನ್ನು ತಿಳಿಸಿಕೊಟ್ಟರು. ಮಹಾಭಾರತವು ವೇದಗಳಿಗೆ ಸಮಾನವೆಂದು ಶ್ರೀಮಧ್ವರು ತಿಳಿಸಿದರು. ವೇದಾರ್ಥಗಳ ಭಂಡಾರದ ಬೀಗದಕೈ ಮಹಾಭಾರತ ದಲ್ಲಿ ಇರುವುದನ್ನು ಶ್ರೀಮಧ್ವರು ತೋರಿಸಿಕೊಟ್ಟರು. ಶ್ರೀಶಂಕರರು ಜೀವಬ್ರಹ್ಮೈಕವಾದವನ್ನು ಪ್ರತಿಪಾದಿಸಿದರು. ರಾಮಾನುಜ ಮತವು ಬ್ರಹ್ಮನನ್ನು ಜಗತ್ತಿಗೆ ಉಪಾದಾನ ಕಾರಣ ಮತ್ತು ಸಮವಾಯ ಕಾರಣ ಎಂದು ಪರಿಗಣಿಸುತ್ತದೆ. ಜೀವರ ಜ್ಞಾನಕ್ಕೆ ಮಿತಿಯಿಲ್ಲವೆಂದೂ, ಮುಕ್ತರಾದ ಮೇಲೆ ಜೀವರು ಭಗವಂತನಿಗೆ ಸಮಾನವಾದ ಆನಂದವನ್ನು ಅನುಭವಿಸುವರೆಂದೂ ಅದರ ಅಭಿಮತ. ಈ ವಿಷಯದಲ್ಲಿ ಮತ್ತು ಇತರ ಕೆಲವು ವಿಷಯಗಳಲ್ಲಿ ಶ್ರೀಮಧ್ವರು ಶ್ರೀರಾಮಾನುಜರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಜೀವಾತ್ಮರು ಪಡೆವ ಆನಂದಾನುಭವದಲ್ಲಾಗಲಿ, ಅವರು ಪರಮಾತ್ಮಸದೃಶರಾಗುವರೆಂಬ ವಿಚಾರದಲ್ಲಿ (ಸಾರೂಪ್ಯ ಮೋಕ್ಷ ಪಡೆವ ವಿಚಾರದಲ್ಲಿ) ಶ್ರೀಮಧ್ವರು ಸಹಮತ ಹೊಂದಿಲ್ಲ. ಜಗತ್ತು ಮತ್ತು ಜೀವಾತ್ಮರು ಪರಮಾತ್ಮನಿಂದ ಅತ್ಯಂತ ಭಿನ್ನರೆಂಬುದೇ ಶ್ರೀಮಧ್ವರ ಅಭಿಪ್ರಾಯ.

'ಮಹಾಭಾರತ ತಾತ್ಪರ್ಯನಿರ್ಣಯ' ಶ್ರೀಮಧ್ವರ ಮಹತ್ವದ ಕೃತಿ. ಇದು ಶ್ಲೋಕಬದ್ಧವಾಗಿದ್ದು ಅದರಲ್ಲಿ ೩೭ ಅಧ್ಯಾಯಗಳಿವೆ. ನಾಲ್ಕು ವೇದಗಳು, ಪಂಚರಾತ್ರ, ಮಹಾಭಾರತ, ಮೂಲ ರಾಮಾಯಣ ಮತ್ತು ಬ್ರಹ್ಮಸೂತ್ರಗಳು ಸ್ವತಃ ಪ್ರಮಾಣಗಳೆಂದು ಶ್ರೀಮಧ್ವರು ಪ್ರತಿಪಾದಿಸುತ್ತಾರೆ. ಅವರ ತತ್ತ್ವವನ್ನು ಹೀಗೆ ಸಂಗ್ರಹಿಸಬಹುದು: ವಿಷ್ಣುವೇ ಪರಬ್ರಹ್ಮ. ಅವನನ್ನೇ ನಾರಾ ಯಣ, ವಾಸುದೇವ ಎಂಬ ನಾಮಗಳಿಂದ ಕರೆಯುತ್ತಾರೆ. ಜಗತ್ಪ್ರವಾಹ ಸತ್ಯ. ಅದು ಸದಾ ಪಂಚಭೇದಗಳಿಂದ ಸಮನ್ವಿತ ವಾಗಿದೆ: ೧) ಜೀವ ಈಶ್ವರ ಭೇದ, ೨) ಜೀವ ಜೀವ ಭೇದ, ೩) ಜಡ ಈಶ್ವರ ಭೇದ, ೪) ಜಡ ಜಡ ಭೇದ, ೫) ಜಡ ಜೀವ ಭೇದ. ಆನಂದ, ಮಹತ್ವ, ಸರ್ವಜ್ಞತ್ವ ಮೊದಲಾದ ಗುಣ ಯುಕ್ತನಾದ ಪರಮಾತ್ಮನ ಉಪಾಸನೆಯಿಂದ ಮಾತ್ರ ಮಾನವರು ಮುಕ್ತಿ ಪಡೆಯಬಲ್ಲರು. ಶ್ರೀವ್ಯಾಸತೀರ್ಥರು ತಮ್ಮ ಒಂದು ಶ್ಲೋಕದಲ್ಲಿ ಮಧ್ವಸಿದ್ಧಾಂತದ ತಿರುಳನ್ನು ಚೆನ್ನಾಗಿ ಸಂಗ್ರಹಿಸಿದ್ದಾರೆ. ಅದರ ಅರ್ಥ ಹೀಗಿದೆ:

"ಶ್ರೀಮಧ್ವಮತದಲ್ಲಿ ಶ್ರೀಹರಿಯೇ ಸರ್ವೋತ್ತಮನು. ಈ ಜಗತ್ತು ಸತ್ಯವಾದದ್ದು. ಪಂಚಭೇದಗಳು ಪಾರಮಾರ್ಥಿಕವಾದುವು. ಜೀವರೆಲ್ಲರೂ ವಿಷ್ಣುವಿನ ದಾಸರು. ಜೀವರಲ್ಲಿ ತಾರತಮ್ಯವಿದೆ. ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಕಾರಣವಾಗುತ್ತದೆ. ಪ್ರತ್ಯಕ್ಷ, ಅನುಮಾನ, ಆಗಮಗಳು ಮೂರು ಪ್ರಮಾಣಗಳು. ಎಲ್ಲಾ ವೇದಗಳಿಂದಲೂ ಶ್ರೀಹರಿಯೇ ಪ್ರತಿಪಾದ್ಯನಾದವನು."

ಮಹಾಭಾರತದ ಶುದ್ಧಪಾಠವನ್ನು ಕಂಡುಹಿಡಿಯಲು ದೇಶ ದಾದ್ಯಂತ ಸುತ್ತಿ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿ ತುಲನಾತ್ಮಕ ವಾಗಿ ಅಭ್ಯಾಸಮಾಡಿ, ನಂತರವೇ ವೇದಶಾಸ್ತ್ರಗಳ ಉಪದೇಶಗಳಿಗೆ ಅನುಗುಣವಾದ ಶುದ್ಧಪಾಠವನ್ನು ಗೊತ್ತುಪಡಿಸಿರುವುದಾಗಿ ಶ್ರೀಮಧ್ವರು ಹೇಳಿದ್ದಾರೆ. (**'ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ । ದೇಶೇದೇಶೇ ತಥಾ ಗ್ರಂಥಾನ್ ದೃಷ್ಟ್ವಾಚೈವ ಪೃಥಗ್ವಿಧಃ'** – ಮಹಾಭಾರತ ತಾತ್ಪರ್ಯ ನಿರ್ಣಯ, ೧೧–೭).

ಶ್ರೀಮಧ್ವರು 'ಭಾಗವತ ತಾತ್ಪರ್ಯನಿರ್ಣಯ' ವನ್ನೂ ಬರೆ ದರು. ಬ್ರಹ್ಮಸೂತ್ರಭಾಷ್ಯ ಬರೆದ ಮೇಲೆ ತಮ್ಮ ಅಭಿಪ್ರಾಯ ಸ್ಪಷ್ಟ ಪಡಿಸಲು "ಅನುವ್ಯಾಖ್ಯಾನ" ಬರೆದರು. ಇದರ ಮೇಲೆ ಜಯ ತೀರ್ಥರು "ನ್ಯಾಯಸುಧಾ" ಎಂಬ ಟೀಕೆಯನ್ನು ರಚಿಸಿದ್ದಾರೆ.

ಶ್ರೀಮಧ್ವರು ಒಟ್ಟು ೩೭ ಗ್ರಂಥಗಳನ್ನು ರಚಿಸಿದರು. ಅವುಗಳನ್ನು 'ಸರ್ವಮೂಲ ಗ್ರಂಥ'ಗಳೆಂದು ಕರೆಯುತ್ತಾರೆ. ಎಂಬತ್ತು ವರ್ಷಗಳ ತುಂಬುಜೀವನವನ್ನು ನಡೆಸಿ ಹಿಮಾಲಯಕ್ಕೆ ಹೋಗಿ, ಅಲ್ಲಿ ಅದೃಶ್ಯರಾದರು. ಇವರ ಗ್ರಂಥಗಳ ಬಗ್ಗೆ ಮಧ್ವ ಮತದ ವಿದ್ವಾಂಸರು ನೂರಾರು ವ್ಯಾಖ್ಯಾನಗಳನ್ನು ಬರೆದಿದ್ದಾರೆ.



# ಶ್ರೀಮಧ್ವಾಚಾರ್ಯರ ಜೀವಿತ ಚರಿತೆ

ಎಚ್.ವಿ. ಸರೋಜ

**ವಿವೇಕಪ್ರಭವು ಆಚಾರ್ಯತ್ರಯರ ಜೀವನವನ್ನು ಕಾಲಕಾಲಕ್ಕೆ ಪ್ರಕಟಿಸುತ್ತ ಬಂದಿದೆ. ಈಗ ಸರಳಭಾಷೆಯಲ್ಲಿ ಬರೆದ ಶ್ರೀಮಧ್ವಾಚಾರ್ಯರ ಜೀವನವೃತ್ತಾಂತವನ್ನು ಪ್ರಕಟಿಸಲು ಸಂತೋಷಿಸುತ್ತದೆ. ಕನ್ನಡನಾಡಿನಲ್ಲಿ ಹುಟ್ಟಿ ಬೆಳೆದ ಮಧ್ವಾಚಾರ್ಯರದು ಘನತೆವೆತ್ತ ಜೀವನ. ಪರಮಾತ್ಮನಲ್ಲಿ ಅಸದೃಶ ಭಕ್ತಿಯನ್ನು ಅವರು ವ್ಯಕ್ತಪಡಿಸಿದರು. ಆ ಭಕ್ತಿತತ್ತ್ವವನ್ನೇ ಎಲ್ಲ ಕಡೆ ಅವರು ಉಪದೇಶಿಸಿದರು. ಎಲ್ಲರಿಗೂ ಅರ್ಥವಾಗುವಂತೆ, ಸ್ವಾರಸ್ಯಕರವಾಗಿ ಆಚಾರ್ಯರ ಈ ಸಂಕ್ಷಿಪ್ತ ಚರಿತ್ರೆಯನ್ನು ಬರೆದುಕೊಟ್ಟಿರುವ ಲೇಖಕಿ ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈಗಾಗಲೇ ಅವರು ಬರೆದಿರುವ ಹಲವು ಲೇಖನಗಳು, ನಾಟಕಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.**

**ಸ್ವವಿಹಿತ ವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮ ಧರ್ಮಃ । ತದನ್ಯಃ ಸರ್ವೋಽಧರ್ಮಃ**

"ತನ್ನ ಸ್ವಭಾವಕ್ಕೆ ವಿಹಿತವಾದ ವೃತ್ತಿಯನ್ನವಲಂಬಿಸಿ ಭಗವದರ್ಪಣ ಬುದ್ಧಿಯಿಂದ, ಭಕ್ತಿಯಿಂದ ಬಾಳನ್ನು ನಡೆಸುವುದೇ ಧರ್ಮ. ಇದಕ್ಕೆ ವಿರುದ್ಧವಾದ, ಸ್ವಾರ್ಥಮಯವಾದ ಎಲ್ಲಾ ಬಗೆಯ ಬದುಕೂ ಅಧರ್ಮ. ಇದೇ ಧರ್ಮಾಧರ್ಮಗಳ ಸಾರ, ಇದೇ ಭಗವದ್ಗೀತೆಯಲ್ಲಿನ ಕೃಷ್ಣನ ಉಪದೇಶದ ಸಾರ" ಎನ್ನುತ್ತಾರೆ ಶ್ರೀಮಧ್ವಾಚಾರ್ಯರು.

"ಈ ವಿಶ್ವ ಬರಿಯ ಮಾಯೆ, ಬ್ರಹ್ಮವೊಂದೇ ಸತ್ಯ" ಎಂದರು ಆಚಾರ್ಯ ಶಂಕರರು. " 'ವಿಶ್ವಾತ್ಮ'ನಾದ ಭಗವಂತನಿಗೆ ಈ ವಿಶ್ವವೇ ಶರೀರವಿದ್ದಂತೆ, ಆದ್ದರಿಂದ ಅದು ಸತ್ಯ" ಎಂದರು ಆಚಾರ್ಯ ರಾಮಾನುಜರು. "ಈ ಜಗತ್ತು ಭಗವಂತನ ಲೀಲಾಸೃಷ್ಟಿ, ಇದನ್ನು ಅವಗಣನೆ ಮಾಡಿ ಅವನ ಮಹಿಮೆಗೆ ಅಪಚಾರ ಮಾಡಬೇಡಿ" ಎಂದರು ಆಚಾರ್ಯ ಮಧ್ವರು. "ಭಗವಂತನ ಸೃಷ್ಟಿಯಾದ ಈ ಜಗತ್ತು ಸತ್ಯ; ಆದ್ದರಿಂದ ಇದು ಒಂದು ಸತ್ಯತತ್ತ್ವ; ಭಗವಂತನ ಮಹಿಮೆಯನ್ನು ಅರಿಯುವ ಶಿಕ್ಷಣ ಶಾಲೆ" ಎನ್ನುವ ವಾದವನ್ನು ಮಂಡಿಸಿದ್ದರಿಂದ ಶ್ರೀಮಧ್ವರ ಸಿದ್ಧಾಂತಕ್ಕೆ 'ತತ್ತ್ವವಾದ' ಎಂದು ಹೆಸರಾಯಿತು.

### ಮಧ್ವಾಚಾರ್ಯರ ಜನನ – ಬಾಲ್ಯ

ಆಚಾರ್ಯ ಮಧ್ವರು ಅಚ್ಚಕನ್ನಡಿಗರು. ಕನ್ನಡನಾಡಿನ ಪಡುಕಡಲ ತೀರದ ಪುಟ್ಟ ಹಳ್ಳಿಯಾದ 'ಪಾಜಕ' ಆಚಾರ್ಯರ ಜನ್ಮಭೂಮಿ. ಪ್ರಾಕೃತಿಕವಾಗಿ ಇದು ತುಂಬಾ ಸುಂದರವಾದ ಹಳ್ಳಿ. ಅಕ್ಕಪಕ್ಕದಲ್ಲಿ ಎರಡು ಪುಟ್ಟ ಬೆಟ್ಟಗಳು. ಒಂದರ ತುದಿಯಲ್ಲಿ ತಾಯಿ ದುರ್ಗೆಯ ಪ್ರಾಚೀನ ಗುಡಿ. ಇನ್ನೊಂದು ಬದಿಯ ಬೆಟ್ಟದಲ್ಲಿ ಪರಶುರಾಮನ ಗುಡಿ. ಈ ಎರಡೂ ಬೆಟ್ಟಗಳ ಬುಡದಲ್ಲಿ ಸಸ್ಯಶ್ಯಾಮಲವಾದ 'ಪಾಜಕ' ಹಳ್ಳಿ ನಿಂತಿದೆ.

ನಾರಾಯಣ ಪಂಡಿತರು (೧೨೮೭–೧೩೫೦) ಬರೆದಿರುವ ಸಂಸ್ಕೃತದ 'ಸುಮಧ್ವವಿಜಯ'ದಿಂದ ಶ್ರೀಮಧ್ವಾಚಾರ್ಯರ ಜೀವನವನ್ನು ಅರಿಯಬಹುದು. ಅವರ ತಂದೆ ತ್ರಿವಿಕ್ರಮ ಪಂಡಿತರು ಶ್ರೀಮಧ್ವರ ಸಮಕಾಲೀನರು.

ಮಧ್ವಾಚಾರ್ಯರು ಮುಖ್ಯಪ್ರಾಣನ ಅವತಾರ; ಮುಖ್ಯ ಪ್ರಾಣದೇವರೇ ರಾಮಾಯಣ ಕಾಲದ ಆಂಜನೇಯನಾಗಿ, ಮತ್ತೆ ಮಹಾಭಾರತದ ಭೀಮನಾಗಿ ಅವತಾರವೆತ್ತಿದ್ದರು; ಅವರೇ ಈಗ ಮಧ್ವಾಚಾರ್ಯರಾಗಿ ಜನಿಸಿದ್ದಾರೆ – ಇದು ಪ್ರಾಚೀನ ನಂಬಿಕೆ.

ಮಧ್ವಾಚಾರ್ಯರು ಹುಟ್ಟಿದ್ದು ೧೨೩೮ರ ಆಶ್ವಯುಜಮಾಸ, ಶುಕ್ಲಪಕ್ಷ, ನವರಾತ್ರಿಯ ವಿಜಯದಶಮಿಯ ದಿನ. ತಂದೆ ಇಟ್ಟ ಹೆಸರು ವಾಸುದೇವ. ಅವರ ತಂದೆ ನಡಿಯಲ್ಲಾಯ ನಾರಾಯಣಭಟ್ಟ ಅಥವಾ ಮಧ್ಯಗೇಹ ಭಟ್ಟ; ತಾಯಿಯ ಹೆಸರು ವೇದವತಿ. 'ಮನೆ ಬೆಳಗುವ ಮಗನೊಬ್ಬ ಬೇಕು' ಎಂದು ಆ ದಂಪತಿ ಬಹಳ ಕಾಲ ಹಂಬಲಿಸಿ, ಕಠಿಣವ್ರತಗಳಿಂದ ಭಗವಂತನನ್ನು ಅನನ್ಯತೆಯಿಂದ ಆರಾಧಿಸಿದರು. ತುಂಬಾ ಮುದ್ದಾದ ಮಗು, ಅಷ್ಟೇ ದಂಗು ಬಡಿಸುತ್ತಿದ್ದವು ಅವನ ಬಾಲಲೀಲೆಗಳು. ವಾಸುದೇವನಿಗೆ ಮೂರು ವರ್ಷವಿದ್ದಾಗ ಅವನ ತಂದೆತಾಯಿಗಳು ಅವನನ್ನು ಕರೆದುಕೊಂಡು, ನಿಡಿಯೂರಿನ ತಮ್ಮ ಬಂಧುಗಳ ಮನೆಗೆ, ಸಮಾರಂಭವೊಂದರಲ್ಲಿ ಪಾಲ್ಗೊಳ್ಳಲು ಹೋಗಿದ್ದರು. ಆಗ ವಾಸುದೇವ ಯಾರಿಗೂ ತಿಳಿಯದಂತೆ ಮೆಲ್ಲನೆ ಮನೆ ಬಿಟ್ಟು ಹೊರಟ. ಆಮೇಲೆ ಮಗುವನ್ನು ಹುಡುಕಿದರೆ ಮಗು ನಾಪತ್ತೆ. ಹುಡುಕುತ್ತಾ ಹೊರಟರು. ದಾರಿಯಲ್ಲಿ ಯಾರೋ ಹೇಳಿದರು, "ಪುಟ್ಟ ಮಗುವೊಂದು ಕೊಡವೂರು ದೇವಾಲಯದ ಬಳಿ ಹೋಗುತ್ತಿದ್ದುದನ್ನು ನಾವು ನೋಡಿದೆವು" ಎಂದು. ಆದರೆ ಅಲ್ಲಿ ಹೋಗಿ ನೋಡಿದಾಗ, ಮಗು ಅಲ್ಲಿರಲಿಲ್ಲ. ಉಡುಪಿಯಿಂದ ಬರುತ್ತಿದ್ದ ದಾರಿಗರು


ಹೇಳಿದರು, "ಗದ್ದೆ ಬಯಲುಗಳನ್ನು ದಾಟಿಕೊಂಡು ಪುಟ್ಟ ಮಗುವೊಂದು, ಬನ್ನಂಜೆಯ ದೇವಾಲಯದತ್ತ ಹೋಗುತ್ತಿತ್ತು" ಎಂದು. ಅಲ್ಲಿಗೂ ಓಡಿದರು, ಆದರೆ ಅಲ್ಲಿಯೂ ಮಗು ಕಾಣ ಲಿಲ್ಲ. ಹಾಗೆ ಹುಡುಕುತ್ತಾ, ಹುಡುಕುತ್ತಾ ಉಡುಪಿಗೆ ಬಂದರು. ಏನಾಶ್ಚರ್ಯ! ಮಗು ವಾಸುದೇವ ಅನಂತೇಶ್ವರನ ಲಿಂಗದ ಮುಂದೆ ಕೈ ಮುಗಿದು ನಿಂತಿದ್ದಾನೆ. ಯಾವ ದೇವರ ಆರಾ ಧನೆಯ ಫಲವಾಗಿ ಈ ಮಗು ಹುಟ್ಟಿತ್ತೋ, ಅವನ ಸನ್ನಿಧಿಯಲ್ಲೇ ಮತ್ತೆ ಮಗುವಿನ ದರ್ಶನವಾಯಿತು. ಇಷ್ಟು ದೂರ ಆ ಪುಟ್ಟ ಮಗು ಹೇಗೆ ಬಂದಿತು ಎಂದು ಎಲ್ಲರಿಗೂ ಆಶ್ಚರ್ಯ. ತಂದೆ ಅಕ್ಕರೆಯಿಂದ ಕೇಳಿದರು, "ಮಗು ವಾಸುದೇವ, ನೀನೊಬ್ಬನೇ ಇಷ್ಟು ದೂರ ಹೇಗೆ ಬಂದೆ? ದಾರಿ ಹೇಗೆ ತಿಳಿಯಿತು ನಿನಗೆ?" ಅದಕ್ಕೆ ಮಗು ಉತ್ತರಿಸಿತು, "ಅಪ್ಪ, ನಾನೊಬ್ಬನೇ ಬಂದದ್ದಲ್ಲ. ಮೊದಲು ಕಾನಂಗಿಯ ಶಂಕರನಾರಾಯಣನನ್ನು ಕಂಡೆ. ಅಲ್ಲಿಂದ ಬನ್ನಂಜೆಯ ಮಹಾಲಿಂಗೇಶ್ವರನನ್ನು ಕಂಡೆ, ಅಲ್ಲಿಂದ ಇಲ್ಲಿಗೆ ಬಂದು ಚಂದ್ರಮೌಳೇಶ್ವರನನ್ನು ಕಂಡೆ. ಈ ಎಲ್ಲಾ ದೇವಾಲಯಗಳಲ್ಲಿ ನೆಲೆಸಿರುವ ದೇವರು ದಾರಿಯುದ್ದಕ್ಕೂ ನನ್ನ ಜೊತೆಗಿದ್ದನು, ಅವನೇ ಜೊತೆಗಾರನಾಗಿ ಬಂದ, ಅವನೇ ದಾರಿ ತೋರಿಸಿದ."

ಶ್ರೀಮಧ್ವರ ಎಳೆತನದ ಜೀವನದಲ್ಲಿ ಇನ್ನೂ ಪವಾಡಗಳಿವೆ. ಹೊಲದಲ್ಲಿ ಮೇಯುತ್ತಿದ್ದ ಎತ್ತಿನ ಬಾಲ ಹಿಡಿದು ಅನೇಕ ಗಂಟೆಗಳ ಕಾಲ ತೂಗಾಡಿದ್ದು, ಹುಣಸೇಬೀಜಗಳನ್ನು ಚಿನ್ನದ ಬೀಜಗಳನ್ನಾಗಿ ಮಾಡಿ, ಸಾಲಗಾರನಿಗೆ ಅದನ್ನು ನೀಡಿ, ತಂದೆಯನ್ನು ಋಣಮುಕ್ತನನ್ನಾಗಿ ಮಾಡಿದುದು, ಅನೇಕ ದಿವಸಗಳು ಒಬ್ಬಂಟಿಯಾಗಿ ನಾರಾಯಣನ ದೇವಸ್ಥಾನದಲ್ಲಿದ್ದದ್ದು ಇತ್ಯಾದಿ.

### ವಿದ್ಯಾಭ್ಯಾಸ

ಮಗುವಿಗೆ ಮೂರು ವರ್ಷ ತುಂಬಿದಾಗ ಅವರ ತಂದೆ ಅಕ್ಷರಾಭ್ಯಾಸ ಮಾಡಿಸಿದರು. ಒಂದು ದಿನದ ಪಾಠ ಮುಗಿಯಿತು. ಮಾರನೇ ದಿನ ಅದೇ ಅಕ್ಷರಗಳನ್ನು ತಿದ್ದಿಸಿದಾಗ ವಾಸುದೇವ ತಂದೆಯನ್ನು ಕೇಳಿದ, "ಅಪ್ಪಾ, ಬರೆದುದ್ದನ್ನೇ ಏಕೆ ಬರೆಸುತ್ತೀರಿ? ಇದನ್ನು ನಿನ್ನೆ ಹೇಳಿಕೊಟ್ಟಾಯಿತಲ್ಲ. ಇವತ್ತು ಹೊಸದನ್ನೇನಾದರೂ ಹೇಳಿಕೊಡಿ." ತಂದೆಗೆ ಸಂತೋಷ, ಆಶ್ಚರ್ಯ. ಮೂರುವರ್ಷದ ಹಸುಳೆಯಲ್ಲಿ ಅದೆಂಥ ಪ್ರತಿಭೆ? ಹುಡುಗನಿಗೆ ಎಲ್ಲಿ ದೃಷ್ಟಿ ಯಾದೀತೋ ಎನ್ನುವ ಭಯ. ಆದ್ದರಿಂದ ತಂದೆ ಮಗನಿಗೆ ಏಕಾಂತದಲ್ಲಿ ಪಾಠ ಮಾಡತೊಡಗಿದರು. ತಾಯಿ ದೃಷ್ಟಿ ನೀವಾಳಿಸಿದರು. ಕೆಲವೇ ಸಮಯದಲ್ಲಿ, ವಾಸುದೇವ ಯಾವುದೇ ಪುಸ್ತಕವನ್ನು ಸೊಗಸಾಗಿ ಓದಬಲ್ಲವನಾದ. ಅವನು ಓದುವುದನ್ನು ಕೇಳುವುದೇ ಒಂದು ಆನಂದ. ಎಂಥ ಕಂಠ ಮಾಧುರ್ಯ, ಎಂಥ ವಾಚನ!

ವಾಸುದೇವನಿಗೆ ಈಗ ಐದು ವರ್ಷ. ಅವನ ತಾಯಿ ಅವನನ್ನು ನೇಯಂಪಳ್ಳಿ ಎಂಬಲ್ಲಿಗೆ ಕರೆದುಕೊಂಡು ಹೋಗಿದ್ದರು. ಸಂಜೆಯ ಹೊತ್ತು ಪುರಾಣ ನಡೆದಿತ್ತು. ಮಡಿತಾಯ ಶಿವಭಟ್ಟರು ಆ ಭಾಗದಲ್ಲೇ ಪ್ರಸಿದ್ಧರಾದ ಪುರಾಣಿಕರು. ಜನರು ಆಸಕ್ತಿಯಿಂದ ಅವರ ವಾಚನವನ್ನು ಕೇಳುತ್ತಿದ್ದರು. ಆಗ ತಾಯಿಯ ಬಳಿ ಕುಳಿತಿದ್ದ ಪುಟ್ಟ ಬಾಲಕ ವಾಸುದೇವ ಎದ್ದು ನಿಂತು, "ಪುರಾಣಿಕರೆ, ಪುರಾಣದ ಅರ್ಥ ಒಂದು, ನೀವು ಹೇಳಿದ್ದು ಇನ್ನೊಂದು ಆಯಿತಲ್ಲಾ?" ಎಂದು ಹೇಳಿದ. ಶಿವಭಟ್ಟರಿಗೆ ಈ ವರ್ತನೆ ಅಧಿಕಪ್ರಸಂಗವೆನ್ನಿಸಿತು. ಆದರೆ ಅಷ್ಟಕ್ಕೇ ಸುಮ್ಮನಾಗದ ವಾಸುದೇವ, ನಿರರ್ಗಳವಾಗಿ ಶ್ಲೋಕದ ನಿಜವಾದ ಅರ್ಥವನ್ನು ಸಭೆಯ ಮುಂದೆ ವಿವರಿಸಿದಾಗ ಅಲ್ಲಿ ನೆರೆದಿದ್ದ ಜನ ತಲೆದೂಗಿದರು.



ಇನ್ನೊಂದು ಸಂದರ್ಭದಲ್ಲಿ ತಂದೆಯೇ ಮಗನ ಕೈಯಲ್ಲಿ ಬೇಸ್ತುಬಿದ್ದರು. ಅವರೂ ಆ ಕಾಲದ ಪ್ರಸಿದ್ಧ ಪುರಾಣಿಕರೇ. ಒಮ್ಮೆ ಅವರ ಪುರಾಣವಾಚನವೇ ನಡೆದಿತ್ತು. ಆಗ ಒಂದು ಶಬ್ದದ ಅರ್ಥ ಅವರಿಗೆ ಆ ಕ್ಷಣ ಹೊಳೆಯಲಿಲ್ಲ. ಅವರು ಆ ಶಬ್ದವನ್ನು ಬಿಟ್ಟು ಮುಂದುವರಿಸಿದರು. ತಕ್ಷಣ ವಾಸುದೇವ ಎದ್ದು ನಿಂತು, "ಅಪ್ಪಾ, ನೀವು ಎಲ್ಲಾ ಮರಗಳ ಹೆಸರನ್ನೂ ಅನುವಾದಿಸಿದಿರಿ, 'ಲಿಕುಚ' ಶಬ್ದದ ಅರ್ಥವನ್ನು ಮಾತ್ರ ಹೇಳಲೇ ಇಲ್ಲ. 'ಹೆಬ್ಬಲಸು' ಎಂದಲ್ಲವೆ ಅಪ್ಪಾ, ಅದರ ಅರ್ಥ" ಎಂದು ನುಡಿದ. ತಂದೆಗೆ ನಾಚಿಕೆ, ಕೋಪ ಏನೂ ಉಂಟಾಗಲಿಲ್ಲ; ಮಗನಿಂದ ಒಂದು ಹೊಸ ಶಬ್ದದ ಅರ್ಥ ತಿಳಿಯಿತಲ್ಲ ಎಂದು ಸಂತೋಷವಾಯಿತು. ಇಂಥ ಮಗನ ತಂದೆಯಾದುದಕ್ಕಾಗಿ ಅವರಿಗೆ ಹೆಮ್ಮೆ ಎನಿಸಿತು. ವಾಸುದೇವನಿಗೆ ಏಳು ವರ್ಷವಾಯಿತು. ನಡಿಯಲ್ಲಾಯರು ಮಗನಿಗೆ ಸಕಾಲದಲ್ಲಿ ಉಪನಯನ ಮಾಡಿದರು. ಅನಂತರ ವೇದಾಧ್ಯಯನಕ್ಕಾಗಿ ಗುರುಕುಲವಾಸವಾಗಬೇಕು. ಆ ಕಾಲದ ಹಿರಿಯ ವೇದಜ್ಞರಾದ ತೋಟಂತಿಲ್ಲಾಯರಲ್ಲಿ ವಾಸುದೇವನ ಅಧ್ಯಯನ ಪ್ರಾರಂಭವಾಯಿತು.

ವಾಸುದೇವನ ಅಧ್ಯಯನದ ಕ್ರಮ ತೋಟಂತಿಲ್ಲಾಯರಿಗೆ ವಿಚಿತ್ರವೆನಿಸಿತು. ಪಾಠದ ಹೊತ್ತಿಗಷ್ಟೆ ಗುರುಗಳ ಎದುರಿಗೆ ಮುಖ ತೋರಿಸುತ್ತಿದ್ದ. ಉಳಿದ ಸಮಯವೆಲ್ಲ ಆಟದ ಬಯಲಲ್ಲಿ. ವಯಸ್ಸಿಗೆ ಮೀರಿದ ದೃಢಕಾಯನಾದ ವಾಸುದೇವ ಆಟದ ಬಯಲಿಗೆ ಇಳಿದನೆಂದರೆ ಸಹಪಾಠಿಗಳೆಲ್ಲ ಅವನನ್ನು ಸುತ್ತುವರಿಯುತ್ತಿದ್ದರು. ಒಂದು ದಿನ ಒಂದೊಂದು ಬಗೆಯ ಆಟ. ಒಮ್ಮೆ ಈಜಾಟದ ಸ್ಪರ್ಧೆ, ಅದರಲ್ಲಿ ಮೊದಲು ತುದಿ